# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## MVC No.1012/2024

ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಸಿ ಹೆಚ್ ಕೆ ವಕೀಲರಿಂದಃ-

ನಾನು ಡಿಪ್ಲೋಮೇ ಓದಿದ್ದೇನೆ. . ಅಪಘಾತದ ಸಮಯದಲ್ಲಿ ನನಗೆ 23 ವರ್ಷ ಆಗಿತ್ತು. ನನ್ನ ಬಳಿ ವಾಹನ ಚಲಾಯಿಸಲು ಡಿಎಲ್ ಇರಲಿಲ್ಲ ಎಂದು ನಾನು ದಂಡ ಕಟ್ಟಿದ್ದೇನೆ. ಡಿಎಲ್ ಇಲ್ಲದೇ ವಾಹನ ಚಲಾಯಿಸುವುದು ಅಪರಾಧ ಎಂದು ನನಗೆ ಗೊತ್ತಿತ್ತು. ನಾನು ಕೆ ಎ 09 ಹೆಚ್ ಯು 1005 ರ ಸ್ಕೂಟಿಯನ್ನು ಅಪಘಾತದ ಸಮಯದಲ್ಲಿ ಚಾಲನೆ ಮಾಡುತ್ತಿದ್ದೆ. ಅದಕ್ಕೆ ವಿಮೆ ಇತ್ತು. ನನ್ನ ವಾಹನಕ್ಕೆ ವಿಮೆ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ವಾಹನದ ವಿಮಾ ಕಂಪೆನಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ತೊಂದರೆ ಇರಲಿಲ್ಲ. ನನ್ನ ಅರ್ಜಿಯನ್ನು ಓದಿ ತಿಳಿದು ಸಹಿ ಮಾಡಿದ್ದೇನೆ. ನಾನು ಅಪಘಾತದ ಸಮಯದಲ್ಲಿ ಟರ್ಬೋ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೆ. ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರ ಎಂದರೆ ನೆನಪಿಲ್ಲ. ನನಗೆ ತಿಂಗಳಿಗೆ ರೂ.25,000/- ಸಂಬಳ ಬರುತ್ತಿತುತ ಎಂದು ತೋರಿಸಲು ನನ್ನ ಬ್ಯಾಂಕ್ ಖಾತೆಯ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು ಅಂತಹ ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಸಹ ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟರ್ಬೋ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇ ಮತ್ತು ತಿಂಗಳಿಗೆ ರೂ.25 ಸಾವಿರ ಸಂಬಳ ಇತ್ತು ಎಂದು ಈ ಕೇಸಿಗಾಗಿ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಪಡಿಸಿದೆ ಎನ್ನುವ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಅಪಘಾತ ಪಡಿಸಿದ ವಾಹನವನ್ನು ನಾನು ಸುಮಾರು 5 ಅಡಿ ಅಂತರದಿಂದ ನೋಡಿದ್ದೇನೆ. ರಸ್ತೆ ನೇರವಾಗಿತ್ತು. ನನ್ನ ಬಳಿ ವಾಹನ ಚಲಾಯಿಸಲು ಡಿಎಲ್ ಇಲ್ಲದೇ ಇದ್ದ ಕಾರಣ ಇನ್ನೊಂದು ವಾಹನವನ್ನು ನೋಡಿ ಗಾಬರಿಗೊಂಡು ನಾನೇ ಸ್ವತಃ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನೇರವಾದ ರಸ್ತೆಯಲ್ಲಿ ಯಾವುದೇ ಸಿಗ್ನಲ್ ಹಾಕಬೇಕಾದ ಅವಶ್ಯಕತೆ ಇರಲಿಲ್ಲ ಎಂದರೆ 1ನೇ ಎದುರುದಾರರು ನೇರವಾದ ರಸ್ತೆಯಲ್ಲಿ ಹೋಗುವಾಗ ಇದ್ದ ಬಲಭಾಗದ ಅಡ್ಡ ರಸ್ತೆಗೆ ತಿರುಗಬೇಕಾಗಿತ್ತು. ಯಾವುದೇ ಸೂಚನೆ ನೀಡದೇ ತಿರುಗಿದ ಕಾರಣ ಅಪಘಾತವಾಗಿದೆ. ಈಗ ನಾನು

ಕೆಲಸಕ್ಕೆ ಹೋಗುತ್ತಿಲ್ಲ. ಅಪಘಾತದಿಂದಾಗಿ ನನ್ನ ಕೈ ಮತ್ತು ಕಾಲಿಗೆ ಏಟಾದ ಕಾರಣ ಕೆಲಸಕ್ಕೆ ಬರಬೇಡಿ ಎಂದು ಹೇಳಿದರು. ನಾನು ಹಾಜರುಪಡಿಸಿದ ಮೆಡಿಕಲ್ ಬಿಲ್ ಗಳನ್ನು ಹೊರತುಪಡಿಸಿ ಬೇರೆ ಮೆಡಿಕಲ್ ಬಿಲ್ ಗಳು ನನ್ನ ಬಳಿ ಇಲ್ಲ.

ನನ್ನ ವಾಹನ ರಿಪೇರಿಗೆ ರೂ.25 ಸಾವಿರ ಖರ್ಚಾಗಿದೆ ಎಂದು ತೋರಿಸಲು ಬಿಲ್ ಹಾಜರುಪಡಿಸಿದ್ದೇನೆ. ನನಗೆ ಅಪಘಾತದಿಂದಾಗಿ ದೈಹಿಕ , ಮಾನಸಿಕ ನೋವು ಸಂಪಾದನೆಯ ನಷ್ಟ ಹಾಗೂ ಭವಿಷ್ಯದ ಸಂಪಾದನೆಯ ನಷ್ಟ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿರುವ ಖರ್ಚುಗಳನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಮುಂಚೆಗಿಂತ ದೈಹಿಕವಾಗಿ ಸದೃಢವಾಗಿ ಆರೋಗ್ಯವಾಗಿ ಇದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ಅನ್ಯತಾ ಲಾಭ ಪಡೆಯಲು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನದ ವಿಮಾ ಕಂಪೆನಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿದರೆ ನನಗೆ ನಷ್ಟ ಉಂಟಾಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದಷ್ಟು ಪರಿಹಾರವನ್ನು 3ನೇ ಎದುರುದಾರರಿಂದ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.